**ಸಾಕ್ಷಿಗೆ ದಿನಾಂಕ 12.03.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: 2ನೇ ಎದುರುದಾರರ ಪರ ವಕೀಲರಿಂದಃ**

1. ನಾನು ಈ ಪ್ರಕರಣದಲ್ಲಿ, 2ನೇ ಎದುರುದಾರ ಕಂಪನಿಯ ಮ್ಯಾನೇಜರ್ ಆಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ಪ್ರತಿರಕ್ಷೆಗೆ ಸಂಬಂಧಿಸಿದಂತೆ ಈ ಕೆಳಕಂಡ ಧೃಢಿಕೃತ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಅರ್ 1 | ಅಧಿಕಾರ ಪತ್ರ |
| ನಿ.ಅರ್ 2 | ವಿಮಾ ಪಾಲಿಸಿ |

3. ನನ್ನ ಮುಖ್ಯ ವಿಚಾರಣಾ ಸಾಕ್ಷಾ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಅರ್ಜಿದಾರರ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

4. 1ನೇ ಎದುರುದಾರರ ವಾಹನ ಅಪಘಾತದಲ್ಲಿ ಒಳಗೊಂಡಿಲ್ಲ ಎಂದು ಪೊಲೀಸ್ ದಾಖಲೆಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಪೊಲೀಸರು ಅಂತಿಮ ವರದಿಯಲ್ಲಿ ವಾಹನ ಪತ್ತೆಯಾಗಿರುವುದಿಲ್ಲ ಎಂದು ಮಾತ್ರ ಹೇಳಿರುತ್ತಾರೆ ಎಂದರೆ ವಾಹನದ ನೋಂದಣಿ ಸಂಖ್ಯೆ ಅಪಘಾತದಲ್ಲಿ ಒಳಗೊಳ್ಳದ ವಾಹನದ ನೋಂದಣಿ ಸಂಖ್ಯೆಯಾಗಿರುತ್ತದೆ. ಸಾಕ್ಷಿ ಮುಂದುವರೆದು ಕೆಎ-03-ಡಿ-3288 ವಾಹನದ ನೋಂದಣಿ ಸಂಖ್ಯೆಯನ್ನು ಬೇರೆ ವಾಹನ ಉಪಯೋಗಿಸುತ್ತಿದ್ದು ಅದು

ಅಪಘಾತ ಪಡಿಸಿರುತ್ತದೆ ಸದರಿ ವಾಹನ ಪತ್ತೆಯಾಗಿರುವುದಿಲ್ಲ ಎಂದು ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ವಿಮಾ ಕಂಪನಿಯಿಂದ ತನಿಖಾ ಏಜನ್ಸಿಯು ಪೊಲೀಸ್ ದಾಖಲೆಯನ್ನು ಮಾತ್ರ ಸಂಗ್ರಹಿಸಿರುತ್ತದೆ.

**1ನೇ ಎದುರುದಾರ ಏಕಪಕ್ಷೀಯ**

**ಮರುವಿಚಾರಣೆ: ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**